# ಜಿಲ್ಲಾ ಪಂಚಾಯತ್, ರಾಯಚೂರು

ಸಂ:ಜಿಪಂಕ/ಕೈವಿ/ಆನ್‌ಲೈನ್ ಅರ್ಜಿ/2023-24

ದಿನಾಂಕ: 21.09.2023.

## ಅಧಿಸೂಚನೆ

ಜಿಲ್ಲಾ ಪಂಚಾಯತ್, ರಾಯಚೂರು (ಕೈಗಾರಿಕಾ ವಿಭಾಗ)ದ 2023-24ನೇ ಸಾಲಿನ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆ (ಜಿಲ್ಲಾ ವಲಯ) ಅಡಿ ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶದ ಒಟ್ಟು 513 ವೃತ್ತಿನಿರತ (ಕಮ್ಮಾರಿಕೆ/ಬಡಿಗೆತನ/ದೋಬಿ/ಕಲ್ಲು ಒಡೆಯುವ/ ಗೋಡೆ ಕಟ್ಟುವ/ಕ್ಷೌರಿಕ) ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ವಿತರಿಸಬೇಕಾಗಿದ್ದರಿಂದ ಈ ಕೆಳನಂತೆ ತಾಲೂಕಾವಾರು ಹಾಗೂ ಪ್ರವರ್ಗವಾರು ಗುರಿ ನಿಗದಿಪಡಿಸಿ, ದಿನಾಂಕ: 27.09.2023 ರಿಂದ 27.10.2023ರ ವರೆಗೆ ವೆಬ್‌ಸೈಟ್ https://raichur.nic.in ಅಥವಾ https://zpraichur.karnatak.gov.in ಮುಖಾಂತರ ಆನ್ ಲೈನ್ ಅರ್ಜಿಗಳು ಆಹ್ವಾನಿಸಲಾಗಿದೆ.

2851-00-107-0-32 (090)

| ಕ್ರ.ಸಂ | ಕಾರ್ಯಕ್ರಮ ವಿವರ | ಪ್ರವರ್ಗ | ಜಿಲ್ಲಾ ಗುರಿ | ರಾಯಚೂರು | ದೇವದುರ್ಗ | ಮಾನವಿ | ಸಿರವಾರ | ಲಿಂಗಸೂಗೂರು | ಮಸ್ಕಿ | ಸಿಂಧನೂರು | ಒಟ್ಟು |
|---|---|---|---|---|---|---|---|---|---|---|---|
| 01 | ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆಯಡಿ | ಪರಿಶಿಷ್ಟ ಜಾತಿ | 388 | 10 | 10 | 10 | 10 | 10 | 10 | 10 | 70 |
| | | ಪರಿಶಿಷ್ಟ ಪಂಗಡ | | 5 | 4 | 4 | 4 | 4 | 4 | 4 | 29 |
| | | ಅಲ್ಪ ಸಂಖ್ಯಾತ | | 9 | 9 | 9 | 9 | 9 | 9 | 9 | 63 |
| | | ಇತರೆ | | 34 | 32 | 32 | 32 | 32 | 32 | 32 | 226 |
| | | | ಒಟ್ಟು | 58 | 55 | 55 | 55 | 55 | 55 | 55 | 388 |

2851-00-107-0-32 (422)

| ಕ್ರ.ಸಂ | ಕಾರ್ಯಕ್ರಮ ವಿವರ | ಪ್ರವರ್ಗ | ಜಿಲ್ಲಾ ಗುರಿ | ರಾಯಚೂರು | ದೇವದುರ್ಗ | ಮಾನವಿ | ಸಿರವಾರ | ಲಿಂಗಸೂಗೂರು | ಮಸ್ಕಿ | ಸಿಂಧನೂರು | ಒಟ್ಟು |
|---|---|---|---|---|---|---|---|---|---|---|---|
| 02 | ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆಯಡಿ | ಪರಿಶಿಷ್ಟ ಜಾತಿ | 75 | 15 | 10 | 10 | 10 | 10 | 10 | 10 | 75 |
| | | | ಒಟ್ಟು | 15 | 10 | 10 | 10 | 10 | 10 | 10 | 75 |

2851-00-107-0-32 (423)

| ಕ್ರ.ಸಂ | ಕಾರ್ಯಕ್ರಮ ವಿವರ | ಪ್ರವರ್ಗ | ಜಿಲ್ಲಾ ಗುರಿ | ರಾಯಚೂರು | ದೇವದುರ್ಗ | ಮಾನವಿ | ಸಿರವಾರ | ಲಿಂಗಸೂಗೂರು | ಮಸ್ಕಿ | ಸಿಂಧನೂರು | ಒಟ್ಟು |
|---|---|---|---|---|---|---|---|---|---|---|---|
| 03 | ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆಯಡಿ | ಪರಿಶಿಷ್ಟ ಪಂಗಡ | 50 | 8 | 7 | 7 | 7 | 7 | 7 | 7 | 50 |
| | | | ಒಟ್ಟು | 8 | 7 | 7 | 7 | 7 | 7 | 7 | 50 |

**ಅರ್ಹತೆಗಳು :**

- ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು ಕನಿಷ್ಟ 21 ವರ್ಷ ಹಾಗೂ ಗರಿಷ್ಟ 55 ವರ್ಷಗಳು ಇರತಕ್ಕದ್ದು. (ಅರ್ಜಿ ಸಲ್ಲಿಸುವ ಪ್ರಾರಂಭವಾಗುವ ದಿನಾಂಕದಂದು)

- ವೃತ್ತಿಪರ ಉಚಿತ ಸುಧಾರಿತ ಸಲಕರಣೆ ಪಡೆಯುವದಕ್ಕಾಗಿ ವೃತ್ತಿನಿರತ (ಕಮ್ಮಾರಿಕೆ/ಬಡಿಗೆತನ/ದೋಬಿ/ಕಲ್ಲು ಒಡೆಯುವ/ಗೋಡೆ ಕಟ್ಟುವ/ಕ್ಷೌರಿಕ) ಕುಶಲಕರ್ಮಿಗಳಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
- ಒಂದು ಕುಟುಂಬಕ್ಕೆ ಒಂದು ಅರ್ಜಿ ಸಲ್ಲಿಸಲು ಮಾತ್ರ ಅವಕಾಶವಿರುತ್ತದೆ.
- ಸರಕಾರದ ಯಾವುದೇ ಯೋಜನೆಯಡಿ ಈಗಾಗಲೇ ಉಚಿತ ಸುಧಾರಿತ ಸಲಕರಣೆ ಪಡೆದಿರುವ ಫಲಾನುಭವಿಗಳು ಅರ್ಜಿ ಸಲ್ಲಿಸಲು ಅರ್ಹವಿರುವುದಿಲ್ಲ.
- ಆನ್‌ಲೈನ್‌ನಲ್ಲಿ https://raichur.nic.in ಅಥವಾ https://zpraichur.karnatak.gov.in ವೈಬ್‌ಸೈಟ್ ಮುಖಾಂತರ ಅವಶ್ಯ ಮಾಹಿತಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳು ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು.
- ಸರ್ಕಾರಿ ನೌಕರರು ಅಥವಾ ಅವರ ಅವಲಂಬಿತರ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ

ಅಪ್ಲೋಡ್ ಮಾಡಬೇಕಾದ ದಾಖಲೆಗಳು (ಸ್ವಯಂ ದೃಢೀಕೃತ ಪ್ರತಿಗಳು):

- ಆಧಾರ ಕಾರ್ಡ್.
- ಪಡಿತರ ಚೀಟಿ.
- ಜಾತಿ ಪ್ರಮಾಣ ಪತ್ರ (ಪ.ಜಾ/ಪ.ಪಂ/ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಮಾತ್ರ)
- ಆಯಾ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ ವೃತ್ತಿಪರ ವೃತ್ತಿ ಮಾಡುತ್ತಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರ.
- ಅಭ್ಯರ್ಥಿ ವಿಕಲಚೇತನ ಇದ್ದಲ್ಲಿ, UDID Card.
- ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ

ಆಯ್ಕೆ ಪ್ರಕ್ರಿಯೆ: ನಿಗದಿಪಡಿಸಿದ ಗುರಿಗಿಂತ ಅಧಿಕ ಅರ್ಹ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ, ಉಪ ನಿರ್ದೇಶಕರು (ಗ್ರಾಮೀಣ ಕೈಗಾರಿಕೆ) ರವರ ಕಛೇರಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಿಲ್ಲಾ ಪಂಚಾಯತ್ ಹೈದಾರಬಾದ ರಸ್ತೆ, ರಾಯಚೂರು ದೂರವಾಣಿ ಸಂಖ್ಯೆ: 08352-200946. ಅಥವಾ ಆಯಾ ತಾಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳಿಗೆ ಸಂಪರ್ಕಿಸಬಹುದಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ರಾಯಚೂರು.

ಪ್ರತಿಯನ್ನು :

1) ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕಾ ಪಂಚಾಯತ್, ರಾಯಚೂರು/ದೇವದುರ್ಗ/ ಮಾನವಿ/ಲಿಂಗಸೂಗೂರು / ಮಸ್ಕಿ/ಸಿರವಾರ/ಸಿಂಧನೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
2) ಜಿಲ್ಲೆಯ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ತಮ್ಮ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರಗೊಳಿಸಲು ಸೂಚಿಸಿದೆ.